# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 55 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 04.03.2025 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಒಟ್ಟು ಹಾಪ್ ಕಾಮ್ಸ್ ಮಳಿಗೆಗಳ ಸಂಖ್ಯೆ ಎಷ್ಟು : ಇರುವ ಮಳಿಗೆಗಳಲ್ಲಿ ಪ್ರಸ್ತುತ ಎಷ್ಟು ಹಾಪ್ ಕಾಮ್ಸ್ ಗಳು ವಹಿವಾಟು ನಡೆಸುತ್ತಿವೆ : ಎಷ್ಟು ಮಳಿಗೆಗಳನ್ನು ಬಂದ್ ಮಾಡಲಾಗಿದೆ : ಬಂದ್ ಆಗಲು ಇರುವ ಕಾರಣಗಳೇನು? | ರಾಜ್ಯದಲ್ಲಿ ಒಟ್ಟು 570 ಹಾಪ್ ಕಾಮ್ಸ್ ಮಳಿಗೆಗಳಿದ್ದು, ಈ ಮಳಿಗೆಗಳ ಪೈಕಿ ಪ್ರಸ್ತುತ 420 ಮಳಿಗೆಗಳು ವಹಿವಾಟು ನಡೆಸುತ್ತಿವೆ. ಒಟ್ಟು 150 ಮಳಿಗೆಗಳನ್ನು ಬಂದ್ ಮಾಡಲಾಗಿದೆ.<br><br>**ಬಂದ್ ಮಾಡಲು ಕಾರಣಗಳು :**<br><br>1. ಜನಸಂದಣಿ ಇರದೇ ಇರುವ ಕಾರಣ, ಹೆಚ್ಚು ವ್ಯಾಪಾರ ವಹಿವಾಟು ನಡೆಯದೇ ಇರುವ ಕಾರಣದಿಂದ ಮಳಿಗೆಗಳನ್ನು ಮುಚ್ಚಲಾಗಿದೆ.<br><br>2. ಹಾಪ್ ಕಾಮ್ಸ್ ಬೆಂಗಳೂರಿನ ನೌಕರರು ಹೆಚ್ಚಿನ ಪ್ರಮಾಣದಲ್ಲಿ ನಿವೃತ್ತಿ ಹೊಂದಿರುತ್ತಾರೆ. ಇದರಿಂದಾಗಿ ನೌಕರರ ಕೊರತೆ ಉಂಟಾಗಿ ಮಳಿಗೆಗಳನ್ನು ಮುಚ್ಚಲಾಗಿರುತ್ತದೆ.<br><br>3. ಬೆಂಗಳೂರಿನ ಪ್ರತಿಷ್ಠಿತ ಮಾಲ್‌ಗಳು ಹಾಗೂ ಖಾಸಗಿ ವ್ಯಾಪಾರಸ್ಥರಿಂದ ತೀವ್ರ ವ್ಯಾಪಾರ ಪೈಪೋಟಿ ಉಂಟಾಗಿರುವುದರ ಜೊತೆಗೆ, ಕೆಲವು ಪ್ರದೇಶಗಳಲ್ಲಿ ರಸ್ತೆಯ ಅಗಲೀಕರಣ, ಮೆಟ್ರೋ ನಿರ್ಮಾಣದಿಂದಾಗಿ ಮಳಿಗೆಗಳನ್ನು ಕೆಡವಲಾಗಿರುತ್ತದೆ. |
| ಆ) | ಹಾಪ್ ಕಾಮ್ಸ್ ಮಳಿಗೆಯಲ್ಲಿ ಯಾವ ಯಾವ ಪದಾರ್ಥಗಳನ್ನು ಮಾರಾಟ ಮಾಡಬೇಕೆಂಬ ನಿಯಮ ಇದೆ : ಕೆಲವೊಂದು ಮಳಿಗೆಗಳಲ್ಲಿ ಖಾಸಗಿ ವ್ಯಕ್ತಿಗಳು ಹಣ್ಣುಗಳನ್ನು ಮಾರಾಟ ಮಾಡುತ್ತಿದ್ದು, ಅದು ಹಾಪ್ ಕಾಮ್ಸ್ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ : | 1. ಹಾಪ್ ಕಾಮ್ಸ್ ಸಂಸ್ಥೆಗಳಲ್ಲಿ ಈ ಕೆಳಕಾಣಿಸಿದ ತೋಟಗಾರಿಕೆ ಉತ್ಪನ್ನಗಳು ಮತ್ತು ಇತರೆ ಪದಾರ್ಥಗಳನ್ನು ಮಾರಾಟ ಮಾಡಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ:-<br><br>i. ಸದಸ್ಯ ರೈತರುಗಳು ಬೆಳೆದ ಕೃಷಿ/ತೋಟಗಾರಿಕೆ ಉತ್ಪನ್ನಗಳು. |

| | | |
|---|---|---|
| | | ii. ಗೊಬ್ಬರಗಳು,ರಾಸಾಯನಿಕ ಗೊಬ್ಬರಗಳು, ತೋಟಗಾರಿಕೆ ಸಲಕರಣೆಗಳು, ಔಷಧಿಗಳು, ಬಿತ್ತನೆ ಬೀಜಗಳು, ಹಿಂಡಿಗಳು.<br><br>iii. ತಾಜಾ ಹಾಗೂ ಸಂಸ್ಕರಿಸಿದ ತೋಟದ ಉತ್ಪನ್ನಗಳು.<br><br>iv. ಹಣ್ಣುಗಳ ರಸ (ಜ್ಯೂಸ್), ಎಳನೀರು, ಕುಡಿಯುವ ನೀರು ಇತ್ಯಾದಿ.<br><br>v. ಕ್ಯಾಂಪ್ಕೋ ಸಂಸ್ಥೆಯ ವಿವಿಧ ಬಗೆಯ ಉತ್ಪನ್ನಗಳು.<br><br>vi. ಕೆ.ಒ.ಎಫ್. ಸಂಸ್ಥೆಯ ಅಡುಗೆ ಎಣ್ಣೆ ಇತ್ಯಾದಿ.<br><br>vii. ಸಿರಿಧಾನ್ಯಗಳು, ಉತ್ತರ ಕರ್ನಾಟಕದ ಪದಾರ್ಥಗಳು. |
| | | 2. ಹಾಪ್ ಕಾಮ್ಸ್ ಸಂಸ್ಥೆಯ ಮಳಿಗೆಗಳಲ್ಲಿ ಯಾವುದೇ ಖಾಸಗಿ ವ್ಯಕ್ತಿಗಳು ಹಣ್ಣುಗಳನ್ನು ಮಾರಾಟ ಮಾಡುತ್ತಿರುವುದಿಲ್ಲ. ಏಕೆಂದರೆ, ಸಂಸ್ಥೆಯ ಬಹುತೇಕ ಮಳಿಗೆಗಳನ್ನು ಸಂಸ್ಥೆಯ ನೌಕರರ ವತಿಯಿಂದಲೇ ನಿರ್ವಹಿಸಲಾಗುತ್ತಿದೆ. ಕೆಲವು ಮಳಿಗೆಗಳನ್ನು ಮಾತ್ರ ಸಂಸ್ಥೆಯ ಬೈಲಾಗಳನ್ವಯ ಖಾಸಗಿ ಸಂಸ್ಥೆಯ ವ್ಯಕ್ತಿಗಳಿಗೆ ಷರತ್ತುಗಳಿಗೊಳಪಟ್ಟು ಫ್ರಾಂಚೈಸಿ ಆಧಾರದ ಮೇಲೆ ನೀಡಲಾಗಿರುತ್ತದೆ. ಸಂಸ್ಥೆಯ ಮಳಿಗೆಗಳಲ್ಲಿ ಆನ್ ಲೈನ್ ಬಿಲ್ಲಿಂಗ್ ವ್ಯವಸ್ಥೆ ಜಾರಿಯಲ್ಲಿದ್ದು, ಸಂಸ್ಥೆಯು ನಿಗಧಿಪಡಿಸಿದ ದರಗಳನ್ನು ತೂಕದ ಮಾಪನ ಯಂತ್ರ (ಸ್ಕೇಲ್) ಗಳಿಗೆ ಪ್ರತಿದಿನ ಆರೋಹಣೆ (upload) ಮಾಡಲಾಗುವುದು. ಸದರಿ ಫ್ರಾಂಚೈಸಿದಾರರು ಸಹ ಸಂಸ್ಥೆಯು ಪ್ರತಿ ದಿನ ನಿಗಧಿಪಡಿಸಿದ ದರಗಳಲ್ಲಿಯೇ ಹಣ್ಣುಗಳನ್ನು ಮಾರಾಟ ಮಾಡುತ್ತಾರೆ. ಹೀಗಾಗಿ ಹಣ್ಣುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಅವಕಾಶ ಇರುವುದಿಲ್ಲ. |

| | | |
|---|---|---|
| ಇ) | ಬೆಂಗಳೂರು ನಗರ ಭಾಗದ ಅನೇಕ ಕಡೆ ಹಾಪ್ ಕಾಮ್ಸ್ ಮಳಿಗೆಗಳಲ್ಲಿ ಅಕ್ಕಿ ಮೂಟೆ ಹಾಗೂ ಇನ್ನಿತರೆ ತೋಟಗಾರಿಕೆಯ ಬೆಳೆಗಳಲ್ಲದ ಸಾಮಾಗ್ರಿಗಳನ್ನು ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ : | ಬಂದಿದೆ.<br>ಹಾಪ್ ಕಾಮ್ಸ್ ಸಂಸ್ಥೆಯ ಲಾಭದಾಯಕತೆ ಹಿತ ದೃಷ್ಟಿಯಿಂದ ಕೃಷಿ ಉತ್ಪನ್ನಗಳಾದ ಅಕ್ಕಿ, ಸಿರಿಧಾನ್ಯ ಹಾಗೂ ಕರ್ನಾಟಕ ಆಯಿಲ್ ಫೆಡರೇಷನ್ ಸಂಸ್ಥೆಯು ಸರಬರಾಜು ಮಾಡುವ ಎಣ್ಣೆ ಇತ್ಯಾದಿ ಉತ್ಪನ್ನಗಳನ್ನು ಮಾರಾಟ ಮಾಡಲು ಸಂಸ್ಥೆಯ ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. |
| ಈ) | ಹಾಗಿದ್ದಲ್ಲಿ ಇದುವರೆಗೂ ಎಷ್ಟು ಮಳಿಗೆಗಳನ್ನು ಪರಿಶೀಲಿಸಲಾಗಿದೆ: ತೆಗೆದುಕೊಂಡ ಕ್ರಮವೇನು : ಇದರಿಂದ ರೈತರಿಗೆ ಅನಾನುಕೂಲ ವಾಗುವುದಿಲ್ಲವೇ : | ಸಂಸ್ಥೆಯ ಬೈಲಾಗಳಲ್ಲಿ ಅಂತಹ ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶ ಕಲ್ಪಿಸಿಕೊಂಡಿರುವುದರಿಂದ ಮಳಿಗೆಯ ವಿಶೇಷ ಪರಿವೀಕ್ಷಣೆಯ ಅವಶ್ಯಕತೆ ಇರುವುದಿಲ್ಲ. ಇದರಿಂದ ಸಂಸ್ಥೆಯ ರೈತರು ಬೆಳೆದ ಬೆಳೆಗಳ ಮಾರಾಟಕ್ಕೆ ಅನಾನುಕೂಲವಾಗುವುದಿಲ್ಲ. |
| ಉ) | ಪ್ರಸ್ತುತ ಎಷ್ಟು ಸಿಬ್ಬಂಧಿಗಳು ಈ ಹಾಪ್ ಕಾಮ್ಸ್ ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಖಾಲಿ ಇರುವ ಸಿಬ್ಬಂದಿಗಳ ಸಂಖ್ಯೆ ಯೆಷ್ಟು? | ರಾಜ್ಯದಲ್ಲಿರುವ ಹಾಪ್ ಕಾಮ್ಸ್ ಸಂಸ್ಥೆಗಳಲ್ಲಿ, ಒಟ್ಟು 524 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, 289 ಹುದ್ದೆಗಳು ಖಾಲಿ ಇರುತ್ತವೆ. |

ಸಂಖ್ಯೆ: HORTI 46 HGM 2025

(ಎಸ್. ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು.